# ಕರ್ನಾಟಕ ವಿಧಾನ ಪರಿಷತ್
## ಶೂನ್ಯ ವೇಳೆ ಸೂಚನೆ

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ ರವರು ಶೂನ್ಯ ವೇಳೆಯಲ್ಲಿ ರಾಜ್ಯದ ಸಹಜ ಹೆರಿಗೆ ವಿಧಾನಗಳಿಗಿಂತ ಸಿಜೇರಿಯನ್ ಹೆರಿಗೆ ಹೆಚ್ಚಾಗುತ್ತಿರುವುದರಿಂದ ಮಹಿಳೆಯರ ಆರೋಗ್ಯದ ಮೇಲೆ ಪರಿಣಾಮ ಬೀರುವುದರಿಂದ ಸಹಜ ಹೆರಿಗೆ ಆದ್ಯತೆ ನೀಡುವ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:-**

ರಾಜ್ಯದಲ್ಲಿ ಇತ್ತೀಚಿನ 2019-20 NFHS-5 ಸಮೀಕ್ಷೆ ಪ್ರಕಾರ ಸಹಜ ಹೆರಿಗೆಗಳು ಹಾಗೂ ಸಿಜೇರಿಯನ್ ಹೆರಿಗಗಳ ಶೇ. ಕೆಳಗಿನಂತಿರುತ್ತದೆ.

| | Karnataka State | |
|---|---|---|
| | Delivery details | NFHS-5 (2019-20) |
| 1 | Births delivered by caesarean section (%) | 31.5 |
| 2 | Births in a private health facility that were delivered by caesarean section (%) | 52.5 |
| 3 | Births in public health facility that were delivered by caesarean section (%) | 22.6 |

ಕರ್ನಾಟಕ ರಾಜ್ಯದ ಕಳೆದ ಮೂರು ವರ್ಷಗಳಲ್ಲಿ ಸಹಜ ಮತ್ತು ಸಿಜೇರಿಯನ್ ಹೆರಿಗೆಗಳ ಅಂಕಿ ಅಂಶ:

| | | Public Deliveries | | | | Private Deliveries | | | |
|---|---|---|---|---|---|---|---|---|---|
| Sl No | Year | Total Deliveries | Normal Deliveries | C - Section Deliveries | C- Section rate | Total Deliveries | Normal Deliveries | C - Section Deliveries | C- Section rate |
| 1 | 2020-21 | 504388 | 364502 | 139886 | 28 | 342965 | 189339 | 153626 | 45 |
| 2 | 2021-20 | 533232 | 377704 | 155528 | 29 | 211041 | 59013 | 152028 | 72 |
| 3 | 2022-23 | 533232 | 377704 | 155528 | 29 | 336577 | 184549 | 152028 | 45 |

ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಸಿಜೇರಿಯನ್ ಹೆರಿಗೆಗಳು ಹೆಚ್ಚಾಗುತ್ತಿರುವುದರಿಂದ ಸಿಜೇರಿಯನ್ ಹೆರಿಗೆಗಳನ್ನು ಕಡಿಮೆ ಮಾಡಲು ಹಾಗೂ ಸಹಜ ಹೆರಿಗೆಗಳನ್ನು ಉತ್ತೇಜಿಸಲು ಈ ಕೆಳಕಂಡ ಕ್ರಮಗಳನ್ನು ಸರ್ಕಾರವು ಕೈಗೊಂಡಿದೆ.

1. ಮಿಡ್ ವೈಫರಿ ಇನ್ನಿಯೇಟಿವ್:-2023 ಜನವರಿಯಿಂದ ಮಿಡ್ ವೈಫರಿ ಇನ್ನಿಯೇಟಿವ್ ಎಂಬ ಉಪಕ್ರಮವನ್ನು ಸರ್ಕಾರ ಜಾರಿಗೊಳಿಸಿದೆ. ಈ ಉಪ ಕ್ರಮದಲ್ಲಿ 18 ತಿಂಗಳವರೆಗೂ ಶುಶ್ರೂಷಾಧಿಕಾರಿಗಳಿಗೆ ಸಹಜ ಹೆರಿಗೆ ಮತ್ತು ಗೌರವಯುತ ಮಾತೃ ಆರೈಕೆಗೆ ಸಂಬಂಧಿಸಿದಂತೆ ವಿಸ್ತೃತ ತರಬೇತಿಯನ್ನು ರಾಜ್ಯದ ವಾಣಿವಿಲಾಸ ಆಸ್ಪತ್ರೆಯಲ್ಲಿ ನೀಡಲಾಗುತ್ತಿದೆ. ಇದರಿಂದ ಸಹಜ ಹೆರಿಗೆಗಳಿಗೆ ಉತ್ತೇಜನವನ್ನು ಮಾಡಲಾಗುತ್ತಿದೆ.

....2

2. ಪ್ರತಿಯೊಂದು ಪ್ರಥಮ ಶಿಫಾರಸ್ಸು ಘಟಕ (FRU)ಗಳಲ್ಲಿ ಸಿಜೇರಿಯನ್ ಆಡಿಟ್ ಮಾಡಲಾಗುತ್ತಿದ್ದು ಪ್ರತಿಯೊಂದು ಸಿಜೇರಿಯನ್‌ಪ್ರಕರಣವನ್ನು ಆಡಿಟ್ ಮಾಡುವುದರಿಂದ ಸಿಜೇರಿಯನ್‌ಗಳನ್ನು ನಿಯಂತ್ರಿಸಲು ಮತ್ತು ಕಡಿಮೆ ಮಾಡಲು ಕ್ರಮವನ್ನು ಜರುಗಿಸಲಾಗಿದೆ.

3. ಸಿಜೇರಿಯನ್ ಹೆರಿಗೆಗಳಿಗೆ ಪ್ರಮುಖ ಕಾರಣವಾದ ಕೆಳಹಂತದಿಂದ ಮೇಲ್ದರ್ಜೆ ಆಸ್ಪತ್ರೆಗಳಿಗೆ ಶಿಫಾರಸ್ಸುಗಳನ್ನು (Patient Referral) ಕಡಿಮೆ ಮಾಡಲು ಹಾಗೂ ಸಹಜ ಹೆರಿಗೆಯನ್ನು ಪ್ರಯತ್ನಿಸಲು ಮತ್ತು ಕೈಗೊಳ್ಳಲು ಶುಶ್ರೂಷಾಧಿಕಾರಿಗಳಿಗೆ ಮತ್ತು ಸ್ತ್ರೀರೋಗ ತಜ್ಞರಿಗೆ ದಕ್ಷತಾ ಮತ್ತು ದಕ್ಷ್ ತರಬೇತಿಯನ್ನು ಕಳೆದ 3 ವರ್ಷಗಳಿಂದ ನೀಡಲಾಗುತ್ತಿದೆ.

4. ಪ್ರಥಮ ಶಿಫಾರಸ್ಸು ಘಟಕ(FRU)ಗಳಲ್ಲಿ ಹೆಚ್ಚಿನ ಸಹಜ ಹೆರಿಗೆಗಳನ್ನು ನೆರವೇರಿಸಲು ಆರೋಗ್ಯ ಕೇಂದ್ರಗಳಿಗೆ ಹೆಚ್ಚಿನ ಸಿಬ್ಬಂದಿಯಾದ ಶುಶ್ರೂಷಾಧಿಕಾರಿಗಳು ಹಾಗೂ ನುರಿತ MCH ತಜ್ಞರನ್ನು ನೇಮಿಸಲು ಸರ್ಕಾರವು ಕ್ರಮಕೈಗೊಳ್ಳುತ್ತಿದೆ.

5. ಗುಣಮಟ್ಟ ಆರೈಕೆಯನ್ನು ಗರ್ಭಿಣಿಯರಿಗೆ ನೀಡುವ ಉದ್ದೇಶದಿಂದ ಮತ್ತು ಸಹಜ ಹೆರಿಗೆಯನ್ನು ಉತ್ತೇಜಿಸಲು Partograph ಬಳಸಲು ಹಾಗು ಅವಶ್ಯವಿದ್ದಲ್ಲಿ ಮಾತ್ರ ಸಿಜೇರಿಯನ್ ಶಸ್ತ್ರಚಿಕಿತ್ಸೆಯನ್ನು ಕೈಗೊಳ್ಳುತ್ತಿರುವ ಬಗ್ಗೆ ಆಸ್ಪತ್ರೆಗಳನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಡಿಯಲ್ಲಿ ಲಕ್ಷ್ಯಯೋಜನೆಯಡಿಯಲ್ಲಿ ಹೊರ ರಾಜ್ಯದಿಂದ ಮೌಲ್ಯಮಾಪಕರುಗಳನ್ನು ಬಳಸಿ ಆಸ್ಪತ್ರೆಯ ಬಾಹ್ಯ ಮೌಲ್ಯಮಾಪನವನ್ನು ಮಾಡಲಾಗುತ್ತಿದೆ ಈ ಮೌಲ್ಯಮಾಪನದಲ್ಲಿ ತೇರ್ಗಡೆಗೊಂಡ ಆರೋಗ್ಯ ಸಂಸ್ಥೆಗಳಿಗೆ ಪ್ರೋತ್ಸಾಹಧನವನ್ನು ಈ ಕೆಳಕಂಡಂತೆ ನೀಡಲಾಗುತ್ತಿದೆ.

| ಕ್ರ ಸಂ | ಆಸ್ಪತ್ರೆಯ ವಿಧ | ಹೆರಿಗೆ ಕೊಠಡಿ | ಶಸ್ತ್ರ ಚಿಕಿತ್ಸಾ ಕೊಠಡಿ |
|---|---|---|---|
| 1 | ವೈದ್ಯಕೀಯ ಕಾಲೇಜು ಆಸ್ಪತ್ರೆ | ರೂ. 6 ಲಕ್ಷ | ರೂ. 6 ಲಕ್ಷ |
| 2 | ಜಿಲ್ಲಾ ಆಸ್ಪತ್ರೆ | ರೂ. 3ಲಕ್ಷ | ರೂ. 3 ಲಕ್ಷ |
| 3 | ತಾಲ್ಲೂಕು ಆಸ್ಪತ್ರೆ | ರೂ. 2 ಲಕ್ಷ | ರೂ. 2ಲಕ್ಷ |
| 4 | ಸಮುದಾಯ ಆರೋಗ್ಯ ಕೇಂದ್ರ | ರೂ. 2 ಲಕ್ಷ | ರೂ. 2 ಲಕ್ಷ |

**ಸಂಖ್ಯೆ: ಆಕುಕ 52 ಎಸ್.ಟಿ.ಕ್ಯೂ 2023**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು